**ಓ.ಎಸ್.ನಂಃ 276/2021**

**ಡಿಡಬ್ಲ್ಯೂ-1**

**ಸಾಕ್ಷಿಯನ್ನು ಕರೆಯಿಸಿ ದಿನಾಂಕಃ 02.02.2026 ರಂದು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ವಕೀಲರಿಂದಃ**

ಚೆನ್ನಪ್ಪ ನನ್ನ ಅಪ್ಪನ ತಾತ. ಸುಬ್ಬಮ್ಮ @ ಕೆಂಪಮ್ಮ ಮತ್ತು ಆಕೆಯ ಗಂಡ ಚೆನ್ನಪ್ಪ ಸುಬ್ಬಮ್ಮ @ ಕೆಂಪಮ್ಮ ರವರ ಸ್ವಂತ ಅಕ್ಕನ ಮಗನಾದ ಸುಬ್ಬಪ್ಪರವರನ್ನು ದತ್ತು ಪಡೆದಿರುತ್ತಾರೆ. ಸದರಿಯವರು ಒಟ್ಟಿಗೆ ನಾನು ಹೇಳಿದಂತೆ ದತ್ತು ಪಡೆದಿಲ್ಲ ಎಂದರೆ ಸರಿಯಲ್ಲ. ಸದರಿ ಸುಬ್ಬಪ್ಪರವರು ಸುಮಾರು 14-15 ವರ್ಷ ವಯಸ್ಸಿನವರಾಗಿರುವಾಗ ದತ್ತಕಕ್ಕೆ ಹೋಗಿರುತ್ತಾರೆ. ಸುಬ್ಬಪ್ಪ ಸಾಯುವವರೆಗೆ ದತ್ತು ಮಗನಾಗಿದ್ದರು. ಸುಬ್ಬಪ್ಪ ಸದರಿ ಮನೆಯಲ್ಲಿ ದತ್ತುಗಿದ್ದ ಬಗ್ಗೆ ದಾಖಲೆ ಇದೆ. ಅದನ್ನು ಹಾಜರುಪಡಿಸುತ್ತೇನೆ. ಸುಬ್ಬಮ್ಮ @ ಕೆಂಪಮ್ಮ ಮತ್ತು ಆಕೆಯ ಗಂಡ ಚೆನ್ನಪ್ಪ ಮತ್ತು ನನ್ನ ತಾತ ಸುಬ್ಬಪ್ಪ ಒಂದೇ ಕುಟುಂಬದಲ್ಲಿದ್ದರು ಎಂದು ತೋರಿಸಲು ಒಂದು ಭೋಗ್ಯ ಪತ್ರವನ್ನು ಹಾಜರುಪಡಿಸಿದ್ದೇನೆ.

ಸದರಿ ಸುಬ್ಬಪ್ಪ ದಿಃ 19.07.1945 ರಂದು ತಾನು ಸುಬ್ಬಮ್ಮ @ ಕೆಂಪಮ್ಮ ಮತ್ತು ಆಕೆಯ ಗಂಡ ಚೆನ್ನಪ್ಪ ರವರ ದತ್ತು ಮಗನಾಗಿರಲು ಸಾಧ್ಯವಿಲ್ಲ ಎಂದು ನೋಂದಾಯಿತ ಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಪತ್ರವನ್ನು ಉಪವಿಭಾಗಾಧಿಕಾರಿಗಳ ಕಛೇರಿಯಲ್ಲಿ ದಿಃ 20.07.1947 ರಂದು ನೋಂದಣಿಯಾಗಿದೆ ಎಂದರೆ ಸರಿಯಲ್ಲ. ದಿಃ 20.07.1947 ರಲ್ಲಿ ಸದರಿ ನೋಂದಾಯಿತ ಪತ್ರವನ್ನು ಬರೆದುಕೊಟ್ಟು ತನ್ನ ವಿಶಿಷ್ಟ ಹಕ್ಕುಗಳನ್ನು ಸುಬ್ಬಪ್ಪ ಬಿಟ್ಟುಕೊಟ್ಟು ಪ್ರತಿಫಲವಾಗಿ ರೂ.200/- ಗಳನ್ನು ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ. ಹಾಗಾಗಿ ಸುಬ್ಬಪ್ಪ ಮತ್ತು ಸುಬ್ಬಮ್ಮ @ ಕೆಂಪಮ್ಮ ಮತ್ತು ಆಕೆಯ ಗಂಡ ಚೆನ್ನಪ್ಪ ರವರ ನಡುವೆ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ದತ್ತು ರದ್ದತಿ ಪತ್ರ ಬರೆದ ನಂತರ ದಾವಾ ಸ್ವತ್ತುಗಳನ್ನು ಖರೀದಿ ಮಾಡಿರುವ ಕಾರಣ ದಾವಾ ಸ್ವತ್ತುಗಳ ಮೇಲೆ ಸುಬ್ಬಪ್ಪರವರಿಗೆ ಯಾವುದೆ ಅಧಿಕಾರ ಮತ್ತು ಹಕ್ಕು ಇಲ್ಲ ಎಂದರೆ ಸರಿಯಲ್ಲ.

ನಾನು ಕಂದಯ ಅಧಿಕಾರಗಳ ಜೊತೆ ಶಾಮಿಲಾಗಿ ದಾವಾ ಸ್ವತ್ತುಗಳನ್ನು ನನ್ನ ತಂದೆ ಮತ್ತು ಎರಡನೇ ಪ್ರತಿವಾದಿ ಹೆಸರಿಗೆ ನಮೂದು ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ಸುಬ್ಬಮ್ಮ ನನ್ನ ಹೆಸರಿಗೆ ಬರೆದಿರುವ ವಿಲ್ ನನ್ನ ಬಳಿ ಇಲ್ಲ ಈಗ ನೋಡಬೇಕು. ನನಗೂ ದಾವಾ ಸ್ವತ್ತಿಗೂ ಮತ್ತು ಸುಬ್ಬಪ್ಪನಿಗೂ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಾನು ದಾವಾ ಸ್ವತ್ತುಗಳಿಗೆ ಹಕ್ಕುದಾರನಲ್ಲ ಎಂದರೆ ಸರಿಯಲ್ಲ. ಸುಬ್ಬಮ್ಮ @ ಕೆಂಪಮ್ಮ ಮತ್ತು ಆಕೆಯ ಗಂಡ ಚೆನ್ನಪ್ಪ ರವರಿಗೆ ವಾದಿ ಮಾತ್ರ ಏಕೈಕ ವಾರಸುದಾರರು ಎಂದರೆ ಸರಿಯಲ್ಲ. ವಾದಿಗೆ ಮಾತ್ರ ದಾವಾ ಸ್ವತ್ತುಗಳಲ್ಲಿ ಸಂಪೂರ್ಣ ಹಕ್ಕು ಇದೆ ಎಂದರೆ ಸರಿಯಲ್ಲ. ಓ.ಎಸ್.ಸಂಖ್ಯೆ 295/2005 ದಾಖಲಾಗಿರುವುದು ಈ ದಾವೆಯ ನೋಟೀಸ್ ಬಂದಿರುವ ನಂತರ ನನಗೆ ತಿಳಿಯಿತು. ಓ.ಎಸ್.ಸಂಖ್ಯೆ 295/2005 ಡಿಕ್ರಿ ಆಗಿರುವುದು ನನ್ನ ಗಮನಕ್ಕೆ ಇದೆ. ಸಾಕ್ಷಿ ಮುಂದುವರೆದು ಸದರಿ ಡಿಕ್ರಿ ಈಗ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇದೆ ಎಂದು ನುಡಿಯುತ್ತಾರೆ. ಓ.ಎಸ್.ಸಂಖ್ಯೆ 295/2005 ರಲ್ಲಿ ವಾದಿಯೆ ದಾವಾ ಸ್ವತ್ತಿನ ಮಾಲೀಕರು ಎಂದು ಡಿಕ್ರಿಯಾಗಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳನ್ನು ಚೆನ್ನಪ್ಪ ತನ್ನ ಅಳಿಯನಾದ ಗಣೇಶನಿಗೆ ದಾನ ಪತ್ರ ಬರೆದುಕೊಟ್ಟಿರುವುದು ನನಗೆ ತಿಳಿದಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕಂದಾಯ ಅಧಿಕಾರಿಗಳ ಜೊತೆ ಶಾಮಿಲಾಗಿ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ, ಸಮಯ ನೀಡಿ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

**(ಗಿರೀಶ ಆರ್.ಬಿ)**

ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಗುಂಡ್ಲುಪೇಟೆ